## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 463

ಸದಸ್ಯರ ಹೆಸರು : ಶ್ರೀ. ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)

ಉತ್ತರಿಸುವ ದಿನಾಂಕ : 22.12.2022

ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕೃಷ್ಣಾ ಮೇಲ್ದಂಡೆ ಯೋಜನೆಯ 519.6 ಮೀಟರ್ 524.257 ಮೀಟರ್‌ನ 3ನೇ ಹಂತದ ಯೋಜನೆಯ ಕಾಮಗಾರಿಯು ಯಾವ ಹಂತದಲ್ಲಿದೆ; 519.6 ಮೀಟರ್ 524.257 ಮೀಟರ್‌ಗೆ ಎತ್ತರಿಸಿದಾಗ ಎಷ್ಟು ಗ್ರಾಮಗಳು ಮುಳುಗಡೆ ವ್ಯಾಪ್ತಿಗೆ ಬರುತ್ತವೆ; ಮುನ್ನೆಚ್ಚರಿಕೆಗಾಗಿ ಪರಿಹಾರ ನೀಡುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿ, ಆಲಮಟ್ಟಿ ಜಲಾಶಯದ ಸಂಗ್ರಹಣೆ ಮಟ್ಟ 519.600 ಮೀ. ರಿಂದ 524.257 ಮೀ ವರೆಗೆ ಎತ್ತರಿಸುವುದರಿಂದ ಒಟ್ಟು 20 ಗ್ರಾಮಗಳು ಮುಳುಗಡೆ ಹೊಂದಲಿದ್ದು, ಒಟ್ಟಾರೆ 24 ಪುನರ್‌ವಸತಿ ಕೇಂದ್ರಗಳನ್ನು ನಿರ್ಮಿಸಲು ಯೋಜಿಸಲಾಗಿದೆ.<br><br>ಇವುಗಳಲ್ಲಿ (1) ಶಿರಬೂರ (ಮಹಾಲಭಾಗಾಯತ್), (2) ಚಿಕ್ಕ ಗಲಗಲಿ (ಮಹಾಲಭಾಗಾಯತ್), (3) ಶಿರಬೂರ+ಚಿಕ್ಕಗಲಗಲಿ (ಝುಂಜರಕೊಪ್ಪ) ಹಾಗೂ (4) ಅಂಕಲಗಿ ಪುನರ್‌ವಸತಿ ಕೇಂದ್ರಗಳಲ್ಲಿ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಮತ್ತು ಉಳಿದ 06 ಪುನರ್‌ವಸತಿ ಕೇಂದ್ರಗಳಾದ (1) ಉದಗಟ್ಟಿ, (2) ಚಿಕ್ಕೂರು, (3) ಬಾವಲತ್ತಿ, (4) ಕುಂದರಗಿ, (5) ಮಾಚಕನೂರು ಮತ್ತು (6) ಕೊಪ್ಪ ಎಸ್.ಕೆ. ಪುನರ್‌ವಸತಿ ಕೇಂದ್ರಗಳಿಗೆ ನಿವೇಶನ ಗುರುತಿಸುವಿಕೆ ಸಂಬಂಧಿತ ಕಾಮಗಾರಿ ವಿವಿಧ ಹಂತದಲ್ಲಿವೆ.<br><br>ಮುಳುಗಡೆ ಬಾಧಿತ ಗ್ರಾಮಗಳಲ್ಲಿರುವ ಕಟ್ಟಡಗಳ ಮೌಲ್ಯಮಾಪನ ಕಾರ್ಯ ಪ್ರಗತಿಯಲ್ಲಿರುತ್ತದೆ. |
| ಆ) | 524.257 ಮೀ. ಮುಳುಗಡೆ ಆಗುವ ಎಷ್ಟು ಗ್ರಾಮಗಳಿಗೆ ಕಟ್ಟಡದ ಪರಿಹಾರ ಒದಗಿಸಲಾಗಿದೆ; ಇನ್ನು ಬಾಕಿ ಉಳಿದ ಗ್ರಾಮಗಳಿಗೆ ಯಾವ ಕಾಲಮಿತಿಯೊಳಗೆ ಪರಿಹಾರ ಒದಗಿಸಲಾಗುವುದು; ಈ ಗ್ರಾಮಗಳಲ್ಲಿರುವ ಎಷ್ಟು ಕಟ್ಟಡಗಳು ಮುಳುಗಡೆ ವ್ಯಾಪ್ತಿಗೆ ಒಳಪಡುತ್ತವೆ; ಆ ಎಲ್ಲಾ ಗ್ರಾಮಗಳಲ್ಲಿನ ಕಟ್ಟಡಗಳಿಗೆ ಪರಿಹಾರ ಧನ ಒದಗಿಸಲಾಗಿದೆಯೇ; (ಒದಗಿಸಿದ್ದಲ್ಲಿ, ಸಂಪೂರ್ಣ ಮಾಹಿತಿ ನೀಡುವುದು) | ಆಲಮಟ್ಟಿ ಜಲಾಶಯದ ಎತ್ತರವನ್ನು 519.600 ಮೀಟರ್ ರಿಂದ 524.257 ಮೀಟರ್ ಎತ್ತರಿಸುವುದರಿಂದ ಒಟ್ಟು 20 ಗ್ರಾಮಗಳ ಕಟ್ಟಡಗಳು ಹಾಗೂ ಬಾಗಲಕೋಟೆ ಪಟ್ಟಣದ ವಾರ್ಡ ನಂ.1 ರಿಂದ 11 ರಲ್ಲಿಯ ಕಟ್ಟಡಗಳು ಸೇರಿ ಒಟ್ಟು 25,661 ಕಟ್ಟಡಗಳು ಮುಳುಗಡೆಯಾಗುತ್ತಿದ್ದು, ಈ ಪೈಕಿ ಬಾಗಲಕೋಟೆ ಪಟ್ಟಣದ ವಾರ್ಡ ನಂ.1 ರಿಂದ 11ರಲ್ಲಿನ 2,383 ಕಟ್ಟಡಗಳನ್ನು ಸ್ವಾಧೀನಪಡಿಸಿಕೊಂಡು ಪರಿಹಾರಧನ ವಿತರಿಸಲಾಗಿದೆ, ಉಳಿದ 20 ಗ್ರಾಮಗಳ ಕಟ್ಟಡಗಳು ಭೂಸ್ವಾಧೀನ ಪ್ರಕ್ರಿಯೆಯು ವಿವಿಧ ಹಂತದಲ್ಲಿದ್ದು, ವಿವರ ಕೆಳಗಿನಂತಿದೆ.<br>➢ 4 ಗ್ರಾಮಗಳ 3,738 ಕಟ್ಟಡಗಳ ಐತೀರ್ಮ ಹಂತದಲ್ಲಿದೆ.<br>➢ 5 ಗ್ರಾಮಗಳ 2,218 ಕಟ್ಟಡಗಳಿಗೆ ಆರ್.ಆರ್.ಎ.ಪಿ. ಹಂತದಲ್ಲಿರುತ್ತದೆ.<br>➢ 8 ಗ್ರಾಮಗಳ 11,458 ಕಟ್ಟಡಗಳಿಗೆ ಅಳತೆ ಕಾರ್ಯ ಪ್ರಗತಿಯಲ್ಲಿರುತ್ತದೆ.<br>➢ 2 ಗ್ರಾಮಗಳ 3909 ಕಟ್ಟಡಗಳಿಗೆ 11(1) ಅಧಿಸೂಚನೆ ಹೊರಡಿಸಲಾಗಿದೆ.<br><br>ಮೇಲ್ಕಾಣಿಸಿದಂತೆ ಕಟ್ಟಡಗಳ ಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಹೊಸ ಭೂಸ್ವಾಧೀನ ಕಾಯ್ದೆ-2013ರನ್ವಯ ನ್ಯಾಯಬದ್ಧ ಪರಿಹಾರಧನ ವಿತರಿಸಲು ಕ್ರಮ ಜರುಗಿಸಲಾಗುವುದು. |
| ಇ) | ಬಾಕಿ ಉಳಿದ ಪರಿಹಾರ ಧನವನ್ನು ಯಾವ ಕಾಲಮಿತಿಯೊಳಗೆ ವಿತರಿಸಲಾಗುವುದು; (ತಿಳಿಸುವುದು) | |
| ಈ) | ಮುಳುಗಡೆ ಆಗುವ ಆ ಭಾಗದ ಎಲ್ಲಾ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸಲಾಗಿದೆಯೇ; 524 ಮೀ. ಮುಳುಗಡೆ ಆಗಿರುವ ಗ್ರಾಮವಾರು ಸಂಪೂರ್ಣ ಮಾಹಿತಿ ನೀಡುವುದು; | |

ಸಂಖ್ಯೆ:ಜಸಂಇ 130 ಡಬ್ಲ್ಯೂಬಿಎಂ 2022

(ಗೋವಿಂದ ಎಂ.ಕಾರಜೋಳ)
ಜಲ ಸಂಪನ್ಮೂಲ ಸಚಿವರು